Computer Set II

ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : (388) 327
2. ಸದಸ್ಯರ ಹೆಸರು : ಶ್ರೀ ಅರವಿಂದ ಕುಮಾರ್ ಅರಳಿ
3. ಉತ್ತರಿಸಬೇಕಾದ ದಿನಾಂಕ : 04-02-2021
4. ಉತ್ತರಿಸುವ ಸಚಿವರು : ಮುಖ್ಯಮಂತ್ರಿಗಳು.

ಸಂ	ಪ್ರಶ್ನೆ	ಉತ್ತರ
ಅ)	ಬೆಂಗಳೂರು ಮೆಟ್ರೋ ರೈಲ್ವೆಯಲ್ಲಿ ಇಲ್ಲಿಯವರೆಗೆ 371ಜೆ ಮೀಸಲಾತಿ ನೀಡಲಾಗಿದೆಯೇ; ಹೌದಾದ್ದಲ್ಲಿ, ಅದರ ಸಂಪೂರ್ಣವಾದ ಮಾಹಿತಿ ಒದಗಿಸುವುದು;	ಬೆಂಗಳೂರು ಮೆಟ್ರೋ ರೈಲು ನಿಗಮದ ನೇಮಕಾತಿಯಲ್ಲಿ 371(ಜೆ) ಮೀಸಲಾತಿ ನೀಡಲಾಗಿರುತ್ತದೆ. ಸಂಸ್ಥೆಯಲ್ಲಿ ಅನುಮೋದಿತ ಒಟ್ಟು 1696 ಹುದ್ದೆಗಳಲ್ಲಿ, 8% ಹುದ್ದೆಗಳನ್ನು ಹೈದ್ರಾಬಾದ್ ಕರ್ನಾಟಕ ಸ್ಥಳೀಯ ವೃಂದಕ್ಕೆಂದು ಮೀಸಲಿಡಲಾಗಿದೆ. ಇವುಗಳಲ್ಲಿ ಅನುಚ್ಛೇದ-371(ಜೆ) ರನ್ವಯ ಸ್ಥಳೀಯ ವೃಂದದಲ್ಲಿ 102 ಹುದ್ದೆಗಳನ್ನು ನೇರ ನೇಮಕಾತಿಗೆ ಹಾಗೂ 34 ಹುದ್ದೆಗಳನ್ನು ಮುಂಬಡ್ತಿ ಹುದ್ದೆಗಳಿಗೆ ನಿಗದಿಪಡಿಸಲಾಗಿದೆ ಸದರಿ ನೇರ ನೇಮಕಾತಿಯಡಿಯಲ್ಲಿ 98 ಹುದ್ದೆಗಳು ಭರ್ತಿ ಮಾಡಲಾಗಿರುತ್ತದೆ. ಅನುಚ್ಛೇದ 371(ಜೆ) ರನ್ವಯ ಸ್ಥಳೀಯ ವೃಂದದಲ್ಲಿ 13 ಉದ್ಯೋಗಿಗಳಿಗೆ ಮುಂಬಡ್ತಿ ನೀಡಲಾಗಿದೆ.
ಆ)	371ಜೆ ಮೀಸಲಾತಿ ನೀಡದಿದ್ದರೆ ಅದಕ್ಕೆ ಕಾರಣಗಳೇನು? (ಮಾಹಿತಿ ಒದಗಿಸುವುದು)	ಸಂಸ್ಥೆಯಲ್ಲಿ 371 (ಜೆ) ರನ್ವಯ ಮೀಸಲಾತಿ ನೀಡಿರುವುದರಿಂದ ಪ್ರಶ್ನೆ ಉದ್ಭವಿಸುವುದಿಲ್ಲ.

ಕಡತ ಸಂಖ್ಯೆ: ನಅಇ 26 ಪಿ.ಆರ್.ಜೆ 2021

(ಬಿ.ಎಸ್.ಯಡಿಯೂರಪ್ಪ)
ಮುಖ್ಯಮಂತ್ರಿಗಳು